ಪ್ರಸ್ತ ಕೋಣೆಯಲಿ ಗಂಗೆ ಕಾಲು ತಡವರಿಸಿದಂಗೆ
ಕೈ ನಡುಗಿ ಹಾಲು ಚೆಲ್ಲಿ ನೀಡಿದಂಗೆ ನೆಲದ ಪಾಲು ॥
ಪಾದಪದುಮ ಮುಟ್ಟಿ ಗಂಗೆ ಕಣ್ಣುಗೊತ್ತಿಕೊಳ್ಳುವಂಗೆ
ತೋರುಬೆರಳು ಗಲ್ಲವನ್ನು ಹಿಡಿದು ಎತ್ತಿ ನಿಂತಂಗೆ ॥

ಕಣ್ಣಮುಂದಿರುವಾತ ದಿಟವಾಗಿ ಹರನೇನು
ವಶವಾಯಿತ್ತೆನ್ನ ತನು ಮನಸು ಶಿವನ ಸಂಗ ॥
ನೀನಿರದ ಜನ್ಮವಿದು ಕವಿದಂಗೆ ಅಂಧಕಾರ
ನಿನ್ನ ಸೋಕಿ ಬೆಳಕಾಯ್ತು ಬಾಳು ಪೂರ ಬಂಗಾರ ॥

ಬೆಳ್ಳಿ ಬೆಟ್ಟ ನೆತ್ತಿಯಲ್ಲಿ ನನ್ನದೊಸ ಸಂಸಾರ
ಹೊನ್ನಗಟ್ಟಿಯಂಗವನೆ ಕೈಹಿಡಿದ ಪರಮೇಶ್ವರ ॥
ಮಂಜು ಬಿಬ್ಬದ ಮೇಲೆ ಚಳಿ ಚಪ್ಪರ ಮಂಚಿಕೆಯ
ಮುತ್ತಗಳ ಹಂಚಿಕೊಂಡು ಕರಪಾಲವೇ ಉಣ್ಣೋ ತಟ್ಟೆ ॥

ನೀರುಂಟು ಕಿಚ್ಚುಂಟು ಅಡುಗೆಯನ್ನು ಮಾಡಲು
ಮಲಗಲಲ್ಲಿ ಮೊಗ್ಗಲಿಗೆ ಇಹದಲ್ಲಾ ಬೆಳದಿಂಗಳು ॥
ಸಿರಿತನದ ಮೇಲಾಸೆ ಕರಗಿಹೋಯ್ತು ದಿಟವಾಗಿ
ಸಕಲವು ವಿಭೂತಿಯೆಂಬ ನಿತ್ಯ ಸತ್ಯ ಅರಿವಾಗಿ ॥

ಅನುಕ್ಷಣವು ಅನುರಣಿಸಿ ನಾನು ಮಾತನಾಡಿದರು
ಅ ಇಲ್ಲ ಊ ಇಲ್ಲ ಮೌನವೇ ನಾಗಾಭರಣ ॥
ಚೆಂಬು ನೀರು ಎರೆದರೆ ವರವ ನೀಡುವೆ ಲಿಂಗ
ಬೋಳೆ ಶಿವನೆಂಬೆಸರು ನಿಜದಿ ಒಪ್ಪುವಂಗೆ ॥

ಮಾರುದ್ದ ಹೂಮಾಲೆಯು ಎರಡು ಅಗುಳು ಅನ್ನ ಸಾಕು
ಆಗುವೆ ನೀ ಕಾಮಧೇನು ಎಂಥ ಚೋದ್ಯವೋ ಏನೋ ॥
ಮುಂಗೋಪಿಯಲ್ಲ ನೀನು ಮುಕ್ಕಣ್ಣನಾದೆ ಲಿಂಗ
ಹುಚ್ಚು ಶಂಕರನೆಂಬ ಬಿರುದು ಬಂತು ನಿಂಗೆ ॥

ಶಂಭೋ ಎಂದರೆ ಅಲ್ಲಿ ಶುಭ ತಾ ನೆಲೆಗೊಂಡಂಗೆ
ಯಮದೂತರ ಪಾಲಿಗೆ ಅಗ್ನಿಬಂಧವಾದಂಗೆ ॥
ದಾಂಪತ್ಯ ಎಂದರದು ಏಳು ಜನ್ಮ ಬಂದಂತೆ
ಸಂಸಾರದ ಅರ್ಥವದು ಚಿರಸ್ನೇಹ ಪಾಕವಂತೆ ॥

